**ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು 3 ನೇ ಎದುರುದಾರರ ಪರವಾಗಿ ಶ್ರೀ ಡಿ ಸಿ ಪಿ ವಕೀಲರಿಂದಃ</u>**

ಅಪಘಾತವು ದಿಃ 15-9-2025 ರಂದು ಸಂಜೆ 4-30 ಗಂಟೆ ಸಮಯಕ್ಕೆ ನಡೆದಿದೆ. ನಾವು 3 ಜನರೂ ಒಂದೇ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಸ್ಕಿಡ್ ಆಗಿ ಬಿದ್ದು ಗಾಯಗೊಂಡಿದ್ದೇವೆ ಎಂದರೆ ಸರಿ. ನಾವು 3 ಜನರೂ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಬಿದ್ದಿದ್ದೇವೆ ಎಂದರೆ ಸರಿಯಲ್ಲ. ನಾನು, ಗೌಸಿಯಾ ಬೇಗಂ ಮತ್ತು ಅಲಿ ರವರು ದರ್ಗಾ ಕಡೆ ಸಂಡೂರುನಿಂದ ಬಾಬಯ್ಯ ಕ್ರಾಸ್ ಕಡೆ ನಡೆದುಕೊಂಡು ಹೋಗುತ್ತಿದ್ದೆವು. ದ್ವಿಚಕ್ರ ವಾಹನ ಬಂದು ನನಗೆ ಢಿಕ್ಕಿ ಹೊಡೆದಿದೆ. ಅದು ಕಪ್ಪು ಬಣ್ಣದ ಹೋಂಡಾ ಆ್ಯಕ್ಟಿವ್ ಆಗಿತ್ತು. ನಾವು 3 ಜನರೂ ನಡೆದುಕೊಡಯಿ ಹೋಗಗುತ್ತಿದಾದಗ ಆ ಸ್ಕೂಟರ್ ಢಿಕ್ಕಿ ಹೊಡೆದಾಗ ಬಿದ್ದು ಗಾಯಗೊಂಡೆವು ನಂತರ ನಮ್ಮನ್ನು ಹಿಟ್ನಾಳ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಸದರಿ ಆಸ್ಪತ್ರೆ ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನಲ್ಲಿದೆ.

ಅಪಘಾತ ಸ್ಥಳದ ಸುತ್ತ ಮುತ್ತ ಯಾವುದೇ ಆಸ್ಪತ್ರೆ ಇರಲಿಲ್ಲವಾ ಎಂದರೆ ಊರಿನವರು ಹಿಟ್ನಾಳ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನುಡಿದಿದ್ದಾರೆ. ಅಪಘಾತ ಸ್ಥಳದಿಂದ ಸಂಡೂರು ಪಟ್ಟಣ 6 ಕಿ. ಮೀ. ದೂರದಲ್ಲಿತ್ತು. ಹಿಟ್ನಾಳ್ ಸ್ಥಳ ಸುಮಾರು 30 ಕಿ. ಮೀ. ದೂರದಲ್ಲಿದೆ. ಅಪಘಾತ ದಲ್ಲಿ ಗಾಯಗೊಂಡರೆ ತಕ್ಷಣವೇ ಹತ್ತಿರದಲ್ಲಿರುವ ಆಸ್ಪತ್ರೆಗೆ ಹೋಗುತ್ತಾರೆ ಎಂದರೆ ಸರಿ. ಆದರೆ ಸಂಬಂಧಕರು ಬಂದು ಅದೇ ಊರಿಗೆ ಕರೆದುಕೊಂಡು ಹೋದರು ಎಂದುನುಡಿದಿರುತ್ತಾರೆ. ನಾನು ಹೇಳುವಂತೇ ಯಾುವುದೆ ಅಪಪಾತ ಆಗಿಲ್ಲ ಆದರೂ ಸಹ ಕೆಲವ ಪರಿಹಾರಕ್ಕಾಗಿ ಪೋಲೀಸರ ಜೊತೆ ಶಾಮಿಲಾಗಿ ಸುಳ್ಳು ದಾಖೆಗಳನ್ನು ಸೃಷ್ಟಿ ಮಾಡಿ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ.

ಹಿಟ್ನಾಳ್ ಆಸ್ಪತ್ರೆಯಲ್ಲಿ 1 ದಿವಸ ಒಳ ರೋಗಿಯಾಗಿ ದಾಖಲಾಗಿದ್ದೆ. ಉಳಿದ ಇಬ್ಬರೂ ಸಹ 1 ದಿವಸ ಅದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. 1 ದಿವಸ ಆದ ನಂತರ ಅಲ್ಲಿಂದ ಬಿಡುಗಡೆಯಾಗಿ ಮನೆಗೆ ಹೋದೆವು. ಆ ನಂತರ ಸರಕಾರಿ ಆಸ್ಪತ್ರೆಗೆ ಹೋದೆವು. ನಂತರ ದಾವಣಗೆರೆ ಎಸ್ ವೈ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ಎಲ್ಲರೂ 2 ದಿವಸ ದಾಖಲಾಗಿ ಚಿಕಿತ್ಸೆ ಪಡೆದೆವು. ಎಸ್ ವೈ ಆಸ್ಪತ್ರೆಯಲ್ಲಿ ಯಾವ ದಿನಾಂಕ ದಾಖಲಾಗಿ ಯಾವ ದಿನಾಂಕ ಬಿಡುಗಡೆಯಾದೆವು ಎನ್ನುವುದನ್ನು ಈಗ

ಹೇಳಲು ಆಗುವುದಿಲ್ಲ. ಅಲ್ಲಿ ಚಿಕಿತ್ಸೆ ಪಡೆದ ನಂತರ ಬೇರೆ ಯಾವುದೇ ಆಸ್ಪತ್ರೆಗೆ ಹೋಗಲಿಲ್ಲ.

ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ಆ ಕೆಲಸ ಮಡುತ್ತಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ನಾನು ಹೇಳುವಂತೆ ನನಗೆ ಯಾವುದೇ ಅಪಘಾತದಿಂದ ಗಾಯ ಆಗಿಲ್ಲ ಮತ್ತು ಏನೂ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ 45 ವರ್ಷ ವಯಸ್ಸು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಪ್ರಕಾರ ನನಗೆ 45 ವರ್ಷ ಎಂದು ಹೇಳಿರುವುದು ಸರಿ ಎಂದು ಹೇಳುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಖಾಸಗಿ ವೈದ್ಯರ ಬಳಿ ಚಿಕಿತ್ಸೆ ಪಡೆದಿದ್ದೇನೆ ಮತ್ತು ಅದಕ್ಕೆ ರೂ. 6 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಸ್ಥಳದಿಂದ ಹಿಟ್ಟಾಳ್ ಆಸ್ಪತ್ರೆಗೆ ಆಟೋದಲ್ಲಿ ಹೋಗಿದ್ದೆವು. ಆ ಆಟೋ ಬೇರೆಯವರದ್ದು. ಅದು ಯಾರದ್ದು ಎನ್ನುವುದು ಗೊತ್ತಿಲ್ಲ. ನಮ್ಮಿಷ್ಟಕ್ಕೆ ನಾವೇ ಬಿದ್ದು ಗಾಯಗೊಂಡಿದ್ದರೂ ಸಹ ವಿವಾ ಸಂಸ್ಥೆಯಿಂದ ಪರಿಹಾರ ಪಡೆಯಬೇಕೆಂದು ಸುಳ್ಳು ಕೇಸುಗಳನ್ನು ದಾಖಲಿಸಿ ಸುಳ್ಳು ಅರ್ಜಿಗಳನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಬಿಲ್ಲುಗಳು ಸುಳ್ಳು ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಧಪಟ್ಟಂತೆ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿಲ್ಲ. ನಾನು ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**